**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎಂ.ಸತೀಶ್ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಉತ್ತರ :-**

**ಹೇಳಿಕೆ:** ದಿನಾಂಕ: 07.03.2025ರಂದು ದಿನ ಪತ್ರಿಕೆಗಳಲ್ಲಿ ಸುದ್ದಿಯಾಗಿರುವ **"ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಬೆಲೆ ಕುಸಿತ ಮತ್ತು ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸಲು ಆಗ್ರಹ"** ಎಂಬ ಸುದ್ದಿಯು ಪ್ರಕಟವಾಗಿದ್ದು, ಬಳ್ಳಾರಿ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಸುಮಾರು 43 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಣಸಿನಕಾಯಿಯನ್ನು ಬೆಳೆಯುತ್ತಿದ್ದು ಕಳೆದ ಎರಡು ಮೂರು ವರ್ಷಗಳಿಂದ ಒಣಮೆಣಸಿನಕಾಯಿಯ ದರವು ಕುಸಿತವಾಗಿ ರೈತರನ್ನು ಸಂಕಷ್ಟಕ್ಕೆ ದೂಡಿದೆ. ಆಳುಕಾಳು, ಬಿತ್ತನೆ ಬೀಜ, ಹಿಡುವಳಿ ಎಲ್ಲಾವನ್ನು ಸೇರಿಸಿದರೆ ಖರ್ಚುಮಾಡಿದ ಬೆಲೆಯೂ ಸಹ ಬರದೆ ರೈತರನ್ನು ಸಾಲಗಾರರನ್ನಾಗಿ ಮಾಡಿದೆ. ಅಲ್ಲದೆ ಜಿಲ್ಲೆಯಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆ ಇಲ್ಲದೆ ತೊಂದರೆಯಾಗಿದ್ದು ರೈತರಿಗೆ ತೊಂದರೆಯಾಗಿರುತ್ತದೆ.

ಈ ಬೆಲೆ ಕುಸಿತವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ಬೆಂಬಲ ಬೆಲೆಯನ್ನು ಘೋಷಿಸುವ ಮೂಲಕ ಹಾಗೂ ಬಳ್ಳಾರಿಯಲ್ಲಿ ತುರ್ತಾಗಿ ಒಣಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸುವ ಮೂಲಕ ರೈತರ ನೆರವಿಗೆ ಬರುವಂತೆ ಈ ಮೂಲಕ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

** ** **

**ಉತ್ತರ:**

ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಆಲದಹಳ್ಳಿ ಗ್ರಾಮದಲ್ಲಿ ಅತ್ಯಾಧುನಿಕ ಸೌಲಭ್ಯವುಳ್ಳ ಒಣಮೆಣಸಿನಕಾಯಿ ಮಾರುಕಟ್ಟೆಯನ್ನು ನಿರ್ಮಾಣ ಮಾಡಲು ಸರ್ಕಾರದ ವತಿಯಿಂದ ತಾತ್ವಿಕ ಮಂಜೂರಾತಿ ದೊರೆತಿದ್ದು, ಯೋಜನೆಯ ಅನುಷ್ಠಾನಕ್ಕೆ ಅವಶ್ಯಕವಾದ ಒಟ್ಟು 23.25 ಎಕರೆ ಜಮೀನನ್ನು ಆಲದಹಳ್ಳಿ ಗ್ರಾಮದಲ್ಲಿ ಕಂದಾಯ ಇಲಾಖೆಯ ವತಿಯಿಂದ ಈಗಾಗಲೇ ಹಂಚಿಕೆಯಾಗಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವಶಕ್ಕೆ ಪಡೆಯಲಾಗಿದೆ.

ಸದರಿ ಜಾಗದಲ್ಲಿ ಯೋಜನೆಯನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಅಧ್ಯಯನ ವರದಿಗಳನ್ನು ತಯಾರಿಸಲು Transaction Advisor ನೇಮಿಸಿಕೊಳ್ಳಲು ಉದ್ದೇಶಿಸಿದ್ದು, ಈ ಕುರಿತಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಪಿಪಿಪಿ ಕೋಶದೊಂದಿಗೆ ಸಂಪರ್ಕ ಸಾಧಿಸಿ ಅವರ ಸಲಹೆ ಸೂಚನೆಯನುಸಾರ ಅಗತ್ಯ ಪ್ರಸ್ತಾವನೆ ಸಿದ್ಧಪಡಿಸಲು ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರಿಗೆ ದಿನಾಂಕ:29/08/2023ರ ಪತ್ರದನ್ವಯ ಸೂಚನೆ ನೀಡಲಾಗಿರುತ್ತದೆ. ಈಗಾಗಲೇ ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಡಿ.ಪಿ.ಆರ್ ತಯಾರಿಸಲು ಕ್ರಮ ವಹಿಸಲಾಗಿದೆ.

ಖಾಸಗಿ ಬಂಡವಾಳದಾರರಿಂದ ಯೋಜನೆ ಅನುಷ್ಠಾನದ ಕುರಿತು ದಿನಾಂಕ:15/11/2022 ರಂದು Expression of Interest ಕರೆದಿದ್ದು ಯಾರಿಂದಲೂ ಪ್ರತಿಕ್ರಿಯೆ ಬಂದಿರುವುದಿಲ್ಲ. ಪುನ: ದಿನಾಂಕ:21/12/2022 ರಲ್ಲಿ Expression of Interest ಕರೆದಿದ್ದು, ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ.

....2

ಆರ್.ಐ.ಡಿ.ಎಫ್-30 ಯೋಜನೆಯಡಿ ಸದರಿ ಯೋಜನೆ ಜಾರಿಗೆ ಅಂದಾಜು ರೂ.25.00 ಕೋಟಿಗಳ ಅನುದಾನಕ್ಕಾಗಿ ಪ್ರಸ್ತಾಪಿಸಿದ್ದು, ಆರ್ಥಿಕ ಇಲಾಖೆ ಅನುಮೋದನೆ ದೊರೆತಿರುವುದಿಲ್ಲ. ಸಮಿತಿಯ ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟು ಯೋಜನೆ ಜಾರಿಗೊಳಿಸುವ ಸಂಬಂಧ ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ದಿನಾಂಕ:17/01/2025 ರಂದು ಬಳ್ಳಾರಿ ಸಮಿತಿಗೆ ಭೇಟಿ ನೀಡಿ ಸ್ಥಳೀಯ ಶಾಸಕರುಗಳೊಂದಿಗೆ ಸಮಾಲೋಚನೆ ನಡೆಸಿದ್ದು, ಸಮಿತಿಯ ಸ್ವಂತ ನಿಧಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆ, ಜಿಲ್ಲಾ ಖನಿಜ ನಿಧಿ ಹಾಗೂ ಸರ್ಕಾರದ ಯೋಜನೆಗಳಡಿಯಲ್ಲಿ ಸಂಪನ್ಮೂಲ ಕ್ರೋಢೀಕರಿಸಿ ಯೋಜನೆ ಅನುಷ್ಠಾನಕ್ಕೆ ಕ್ರಮ ವಹಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ದಿನಾಂಕ:03/02/2025 ರಲ್ಲಿ ಆರ್.ಐ.ಡಿ.ಎಫ್-30 ಯೋಜನೆಯಡಿ ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿನ ಆಲದಹಳ್ಳಿ ಒಣಮೆಣಸಿನಕಾಯಿ ಮಾರುಕಟ್ಟೆಯಲ್ಲಿ 3000 ಮೆಟ್ರಿಕ್ ಟನ್ ಸಾಮರ್ಥ್ಯದ ಶೀತಲ ಗೃಹ ಕಾಮಗಾರಿಯನ್ನು ರೂ.11.75 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಅಂದಾಜು ಪಟ್ಟಿಗೆ ಕೇಂದ್ರ ಕಛೇರಿಯಿಂದ ಅನುಮೋದನೆ ನೀಡಲಾಗಿದೆ. ಟೆಂಡರ್ ಅಹ್ವಾನಿಸಲಾಗಿದ್ದು, ಕಾಮಗಾರಿ ಕೈಗೊಳ್ಳುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

2024-25ನೇ ಸಾಲಿಗೆ ವಾಣಿಜ್ಯ ಬೆಳೆಯಾದ ಒಣಮೆಣಸಿನಕಾಯಿ ಉತ್ಪನ್ನವನ್ನು ರಾಜ್ಯದ ಬಳ್ಳಾರಿ, ಗದಗ, ಧಾರವಾಡ, ಬಾಗಲಕೋಟೆ, ರಾಯಚೂರು, ವಿಜಯನಗರ, ಹಾವೇರಿ ಮತ್ತು ಕೊಪ್ಪಳ ಜಿಲ್ಲೆಗಳಿಂದ ಸುಮಾರು 1.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಂದಾಜು 2.76 ಲಕ್ಷ ಮೆಟ್ರಿಕ್ ಟನ್ ಬೆಳೆಯಲಾಗುತ್ತಿದೆ.

ರಾಜ್ಯದ ಪ್ರಮುಖ ಮಾರುಕಟ್ಟೆಗಳಲ್ಲಿ ಕಳೆದ 05 ಸಾಲುಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಮಾರುಕಟ್ಟೆ ಆವಕ ಹಾಗೂ ಧಾರಣೆಯ ವಿವರಗಳು ಈ ಕೆಳಗಿನಂತಿದೆ :-

| ಕ್ರ. ಸಂ. | ವರ್ಷ | ವಿಸ್ತೀರ್ಣ (ಲಕ್ಷ ಹೆ.ಗಳಲ್ಲಿ) | ಉತ್ಪಾದನೆ (ಲಕ್ಷ ಮೆ.ಟನ್) | ಆವಕ (ಕ್ವಿ.ಗಳಲ್ಲಿ) | ಕನಿಷ್ಟ ದರ (ಪ್ರತಿ ಕ್ವಿ. ರೂ.ಗಳಲ್ಲಿ) | ಗರಿಷ್ಠ ದರ (ಪ್ರತಿ ಕ್ವಿ. ರೂ.ಗಳಲ್ಲಿ) | ಮಾದರಿ ಧಾರಣೆ (ಪ್ರತಿ ಕ್ವಿ. ರೂ.ಗಳಲ್ಲಿ) |
|---|---|---|---|---|---|---|---|
| 1 | 2020-21 | 1.05 | 2.23 | 18,15,917 | 9,040 | 20,122 | 14,440 |
| 2 | 2021-22 | 1.50 | 2.13 | 21,05,541 | 10,938 | 21,871 | 15,551 |
| 3 | 2022-23 | 1.27 | 1.71 | 10,09,888 | 16,147 | 33,370 | 23,681 |
| 4 | 2023-24 | 2.08 | 3.20 | 20,22,678 | 13,772 | 34,071 | 24,817 |
| 5 | 2024-25 | 1.50 | 2.76 | 17,66,995 | 8,454 | 19,511 | 15,740 |

ಪ್ರಸ್ತುತ ರಾಜ್ಯದ ಪ್ರಮುಖ ಮಾರುಕಟ್ಟೆಗಳಲ್ಲಿ ಆವಕವಾಗಿರುವ ತಳಿವಾರು ಒಣಮೆಣಸಿನಕಾಯಿ ವಿವರಗಳು ಈ ಕೆಳಗಿನಂತಿದೆ :-

ಇತ್ತೀಚಿನ 04 ತಿಂಗಳ ಒಣಮೆಣಸಿನಕಾಯಿ ಧಾರಣೆ

| ಮಾಹೆ | ಕಡ್ಡಿ | | ಡಬ್ಬಿ | | ಗುಂಟೂರು | |
|---|---|---|---|---|---|---|
| | ಆವಕ (ಕ್ವಿ.) | ಮಾದರಿ ಧಾರಣೆ | ಆವಕ (ಕ್ವಿ.) | ಮಾದರಿ ಧಾರಣೆ | ಆವಕ (ಕ್ವಿ.) | ಮಾದರಿ ಧಾರಣೆ |
| ನವೆಂಬರ್ | 33,736 | 22,135 | 17,697 | 23,731 | 25,710 | 12,985 |
| ಡಿಸೆಂಬರ್ | 57,067 | 23,711 | 28,701 | 25,580 | 42,292 | 13,182 |

| | | | | | | |
|---|---|---|---|---|---|---|
| ಜನವರಿ | 1,26,652 | 26,769 | 57,575 | 29,214 | 91,939 | 14,166 |
| ಫೆಬ್ರುವರಿ | 1,57,542 | 25,302 | 80,478 | 28,407 | 1,16,310 | 11,100 |

ಫೆಬ್ರುವರಿ ಮಾಹೆಯ ಸರಾಸರಿ ದರಗಳು (ತಳಿವಾರು)

| ಕ್ರ.ಸಂ. | ತಳಿ | ಕನಿಷ್ಠ | ಗರಿಷ್ಟ | ಸರಾಸರಿ |
|---|---|---|---|---|
| 1 | ಡಬ್ಬಿ | 3,092 | 33,865 | 28,312 |
| 2 | ಕಡ್ಡಿ | 3,881 | 22,033 | 25,302 |
| 3 | ಬ್ಯಾಡಗಿ | 18,917 | 27,167 | 22,571 |
| 4 | ಗುಂಟೂರು | 12,361 | 17,515 | 11,100 |
| 5 | ಸ್ಥಳೀಯ | 7,526 | 14,741 | 10,935 |
| 6 | ಇತರ | 12,381 | 16,667 | 13,786 |

ಮೇಲಿನ ತಃಖ್ತೆಯಲ್ಲಿ ವಿವರಿಸಿರುವಂತೆ, ಡಬ್ಬಿ, ಕಡ್ಡಿ ಮತ್ತು ಬ್ಯಾಡಗಿ ಒಣಮೆಣಸಿನಕಾಯಿ ತಳಿಯ ಧಾರಣೆಗಳು ಮಾರುಕಟ್ಟೆಯಲ್ಲಿ ಕಳೆದ 04 ತಿಂಗಳಲ್ಲಿ ಉತ್ತಮ ಧಾರಣೆಗೆ ಮಾರಾಟವಾಗುತ್ತಿದ್ದು, ಉಳಿದಂತೆ ಗುಂಟೂರು, ಸ್ಥಳೀಯ ಹಾಗೂ ಇತರೆ ತಳಿಯ ಒಣಮೆಣಸಿನಕಾಯಿ ಧಾರಣೆಯಲ್ಲಿ ಇಳಿಮುಖವಾಗಿರುತ್ತದೆ.

2025-26ನೇ ಸಾಲಿನ ಪ್ರಮುಖ ಬೆಳೆಗಳ ಉತ್ಪಾದನಾ ವೆಚ್ಚವನ್ನು ಅಂದಾಜಿಸಿ ಅದರಂತೆ ಪ್ರತಿ ಬೆಳೆಯ Cost (A1+FL) + 50% ಮತ್ತು (Cost (C2) + 50% ಮೊತ್ತವನ್ನು ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ನಿಗದಿಪಡಿಸಲು ಕೇಂದ್ರ ಸರ್ಕಾರದ Commission for Agricultural Costs and Prices (CACP) ಸಂಸ್ಥೆಗೆ ಕರ್ನಾಟಕ ಕೃಷಿ ಬೆಲೆ ಆಯೋಗದಿಂದ ಶಿಫಾರಸ್ಸು ಮಾಡಲಾಗಿರುತ್ತದೆ.

ಒಣಮೆಣಸಿನಕಾಯಿ ಉತ್ಪನ್ನವು ಕೇಂದ್ರ ಸರ್ಕಾರವು ಘೋಷಿಸುವ ಬೆಂಬಲ ಬೆಲೆ ಯೋಜನೆಯ ವ್ಯಾಪ್ತಿಗೆ ಒಳಪಡದೇ ಇರುವುದರಿಂದ, ಸದರಿ ಉತ್ಪನ್ನವನ್ನು ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿಯಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶ ಬೆಲೆ (Market Intervention Price) ನಿಗದಿಪಡಿಸಿ ಒಣಮೆಣಸಿನಕಾಯಿ ಬೆಳೆಯುವ ಪ್ರಮುಖ ಜಿಲ್ಲೆಗಳಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿಯಲ್ಲಿ ಖರೀದಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪರಿಶೀಲಿಸಲಾಗುವುದು.

**ಸಂಖ್ಯೆ: ಸಿಒ 58 ಎಂಆರ್‌ಇ 2025**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು